# ಹಾರುವ ಹದ್ದಿಗೆ ಮನೆ ಮದ್ದು







■ ಆರ್ ಕೆ ಮಧು

ಮುಂಜಾನೆ 7 ಗಂಟೆ, ಮುಖ್ಯರಸ್ತೆಯಲ್ಲಿ ಯಾವುದೋ ದೊಡ್ಡ ಹಕ್ಕಿ ಮುದುಡಿ ಬಿದ್ದಿತ್ತು. ಯಾವುದೋ ವಾಹನ ಗುದ್ದಿರಬೇಕು. ಕಾರಿನಿಂದ ಇಳಿದು ಸಮೀಪಿಸಿದೆ. ಉಸಿರಾಟ ಕ್ಷೀಣಿಸಿತ್ತು. ಮೆಲ್ಲನೆ ರಸ್ತೆಯಿಂದ ಎತ್ತಿಕೊಂಡು ಕಾರಿನಲ್ಲಿ ಕೂರಿಸಿಕೊಂಡು ಶಾಲೆಗೆ ನಡೆದೆ.

ಊರಿನ ಹದ್ದು ಪರಯ್ಯಾ ಕೈಟ್ (ಮಿಲ್ವಸ್ ಮೈಗ್ರಾನ್ಸ್) ಎಂಬ ನಾಮಾಂಕಿತ ಈ ಹಕ್ಕಿ ಇಲ್ಲದಿದ್ದರೆ ನಾವೆಲ್ಲಾ ನೆಮ್ಮದಿಯ ಬದುಕು ಬದುಕಲಾರೆವು. ಊರಲ್ಲಿ ನಾವು ಎಸೆವ ಕಸ ಕಡ್ಡಿ, ಸತ್ತ ಪ್ರಾಣಿಗಳನ್ನು ತಿಂದು ನಮ್ಮ ಪರಿಸರವನ್ನು ಆರೋಗ್ಯವಾಗಿ ಇಡುವಲ್ಲಿ ಇವು ಮಹತ್ವದ ಪಾತ್ರ ವಹಿಸುತ್ತವೆ. ಗಂಡು, ಹೆಣ್ಣು ಒಂದೇ ರೀತಿಯಾಗಿರುವ ಈ ಹಕ್ಕಿ ಎತ್ತರದ ಮರಗಳಲ್ಲಿ ಗೂಡು ಮಾಡುತ್ತದೆ. ಮರಗಳ ಅಭಾವದಿಂದ ಈ ಹಕ್ಕಿ ಈಗ ತೊಂದರೆಗೆ ಸಿಲುಕಿದೆ.

ಶಾಲೆಯಲ್ಲಿ ನಿತ್ರಾಣವಾಗಿದ್ದ ಈ ಹದ್ದಿಗೆ ಮೊದಲು ಗ್ಲೂಕೋಸ್ ನೀರು ಕುಡಿಸಿದೆವು. ತರಕಾರಿ ಕಾಳು, ಬೇಯಿಸಿ ತಿನಿಸಿದೆವು. ಆದರೂ ಅಲ್ಲಾಡುತ್ತಿರಲಿಲ್ಲ. ಬಾಯಿಯನ್ನು ಬಿಡಿಸಿ ಇದಕ್ಕೆ ತಿನ್ನಿಸಬೇಕಿತ್ತು. ಈ ಹದ್ದು ತನ್ನ ಸರಹದ್ದು ಮೀರಿ ನೆಲಕ್ಕೆ ಬಂದು, ಹದ್ದು ಮೀರಿ ವಾಹನ ಚಾಲನೆ ಮಾಡುವ ಯಾರಿಗೋ ಸಿಲುಕಿ ಸಾವಿನ ದವಡೆಯಿಂದ ನನ್ನ ಹದ್ದುಬಸ್ತಿಗೆ ಬಂದಿತ್ತು. ನಮ್ಮ ಶಾಲೆಯ ಸ್ವಾತಂತ್ರ್ಯೋತ್ಸವಕ್ಕೆ ಮತ್ತೊಬ್ಬ ಅತಿಥಿ ಬಂದಿದ್ದ.